ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ ನಗರ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡದಲ್ಲಿ (ಕೆ.ಎಸ್.ಆರ್.ಟಿ.ಸಿ.ದವರು) ಮುಖ್ಯ ವಾಹನ ನಿಲ್ದಾಣದ ಹೊಸ ಕಟ್ಟಡ ಕಟ್ಟಿಸಿ ಪ್ರಾರಂಭಿಸಲು ಯಾವಾಗ ಅಡಿಗಲ್ಲು ಹಾಕಲಾಯಿತು; (ಪೂರ್ಣ ದಿನಾಂಕದ ವಿವರ ತಿಳಿಸುವುದು)

ಆ) ಧಾರವಾಡ ಮುಖ್ಯ ವಾಹನ ನಿಲ್ದಾಣದ ನಿರ್ಮಾಣ ಕಾರ್ಯವನ್ನು ಇನ್ನು ಪ್ರಾರಂಭಿಸದೆ ಇರುವುದು ನಿಜವೇ?

ಇ) ಯಾವಾಗ ಅದರ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿ ಪೂರೈಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಸದರಿ ಅಡಿಗಲ್ಲು ಸಮಾರಂಭವನ್ನು ದಿನಾಂಕ: 20-1-1995ರಂದು ನೆರವೇರಿಸಲಾಗಿರುತ್ತದೆ.

ಆ) ಧಾರವಾಡ ಶಹರದಲ್ಲಿ ನೂತನ ಬಸ್ ನಿಲ್ದಾಣಕ್ಕಾಗಿ ಗುಲಗಂಜಿಕೊಪ್ಪ ಗ್ರಾಮದ ಬ್ಲಾಕ್ ನಂ.81ರ ಕ್ಷೇತ್ರ 7 ಎಕರೆ 7 ಗುಂಟೆ ಜಮೀನನ್ನು ಜಿಲ್ಲಾಧಿಕಾರಿ ಧಾರವಾಡ ಇವರು ದಿನಾಂಕ: 13-11-1994ರಂದು ಮಂಜೂರಾತಿ ಮಾಡಿರುತ್ತಾರೆ. ಈ ಜಮೀನು ಕಾರಾಗೃಹ ಇಲಾಖೆಗೆ (ಬಾಲಾಪರಾಧ ಶಾಖೆ) ಸೇರಿದುದಾಗಿದ್ದುದರಿಂದ ಬಸ್ ನಿಲ್ದಾಣ ನಿರ್ಮಾಣಕ್ಕಾಗಿ ನೀಡಿದ ಮಂಜೂರಾತಿಯನ್ನು ಧಾರವಾಡ ಜಿಲ್ಲೆ ಜಿಲ್ಲಾಧಿಕಾರಿಗಳು ದಿನಾಂಕ: 25-3-98ರ ಆದೇಶದಲ್ಲಿ ರದ್ದುಗೊಳಿಸಿದ್ದಾರೆ. ಆದ್ದರಿಂದ ಧಾರವಾಡ ಮುಖ್ಯ ವಾಹನ ನಿಲ್ದಾಣದ ಕಾರ್ಯ ಪ್ರಾರಂಭವಾಗಿರುವುದಿಲ್ಲ.

ಇ) ಈ ಹಿಂದೆ ಮಂಜೂರಾಗಿದ್ದ ಬಾಲಾಪರಾಧಿ ಶಾಲೆಯ ಜಾಗವು ಬಸ್ ನಿಲ್ದಾಣ ನಿರ್ಮಿಸಲು ಅತ್ಯಂತ ಸೂಕ್ತವಾಗಿದ್ದು ಸದರಿ ಜಾಗವನ್ನು ಬಸ್ ನಿಲ್ದಾಣ ನಿರ್ಮಿಸಲು ಸಂಸ್ಥೆಗೇ ಒದಗಿಸಲು ಕ್ರಮ ಕೈಗೊಂಡು ನಿಲ್ದಾಣವನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ಬಗರ್ ಹುಕುಂ ಸಾಗುವಳಿ

2751: (3728)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಜಮೀನನ್ನು ಸಕ್ರಮಗೊಳಿಸಲು ಸಂಬಂಧಪಟ್ಟ ಸಮಿತಿಗಳಿಗೆ ಎಷ್ಟು ಜನರು ಅರ್ಜಿಗಳನ್ನು ಸಲ್ಲಿಸಿದ್ದಾರೆ?

ಆ) ಸಕ್ರಮಗೊಳಿಸಲು ಕೋರಿರುವ ಜಮೀನಿನ ವಿಸ್ತೀರ್ಣ ಎಷ್ಟು ಇಲ್ಲಿಯವರೆಗೂ ವಿಲೇವಾರಿ ಮಾಡಲಾಗಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಇ) ಸಕ್ರಮಗೊಳಿಸಲಾಗಿರುವ ಜಮೀನಿನ ವಿಸ್ತೀರ್ಣ ಎಷ್ಟು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 10,86,826 ಅರ್ಜಿಗಳು

ಆ) 1. 25,80,124 ಎಕರೆ

2. 8,45,118 ಅರ್ಜಿಗಳು (ಮಾರ್ಚ್ 98 ರವರೆಗೆ)

ಇ) 5,45,186.26 ಎಕರೆ

ರಾಜ್ಯದಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅಕ್ರಮ ಸಾಗುವಳಿ ಭೂಮಿ.

2752: (3729)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ಯರ್ಥವಾಗದೆ ಬಾಕಿ ಉಳಿದಿರುವ ಅಕ್ರಮ ಸಾಗುವಳಿ ಭೂಮಿ ಸಕ್ರಮೀಕರಣಕ್ಕಾಗಿ ಬಂದಿದ್ದ ಅರ್ಜಿಗಳ ಸಂಖ್ಯೆ ಎಷ್ಟು?

ಆ) ಇದುವರೆಗೂ ಎಷ್ಟು ಅರ್ಜಿಗಳು ಇತ್ಯರ್ಥವಾಗಿವೆ: ಇತ್ಯರ್ಥವಾಗದೆ ಬಾಕಿ ಉಳಿದಿರುವ ಅರ್ಜಿಗಳು ಎಷ್ಟು?

ಇ) ಬಾಕಿ ಉಳಿದಿರುವ ಅರ್ಜಿಗಳ ವಿಲೇವಾರಿಗಾಗಿ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):